VIJAYAKUMAR KANNUR
Digitally signed by VIJAYAKUMAR KANNUR
Date: 2026.02.04 15:32:37 +0530



**ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ**

**ಸಾಕ್ಷಿಗೆ ಇಂದು ದಿನಾಂಕ 04.02.2026 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಜಿ ಎಸ್ ಪಿ ವಕೀಲರಿಂದ :**

ಮುಧೋಳದ ಸಿವಿಲ್ ನ್ಯಾಯಾಲಯದಲ್ಲಿನ ಅಸಲು ದಾವಾ ನಂ. 227/2013 ರ ದಾವೆಯಲ್ಲಿ ನಮ್ಮ ಪರವಾಗಿ ಶ್ರೀ ಎಸ್ ಜಿ ನಿರಾಣಿ ವಕೀಲರು ಮತ್ತು ಶ್ರೀ ಎಲ್ ಎಸ್ ಡಾಂಗಿ ವಕೀಲರನ್ನು ನೇಮಕ ಮಾಡಿಕೊಂಡಿದ್ದೇವು ಎಂದರೆ ಸರಿ. ಈ ದಾವೆ ದಾಖಲಾದ ನಂತರ ನಾನು ಮತ್ತು ನಮ್ಮ ಕುಟುಂಬ ಸದಸ್ಯರು ಕೂಡಿಕೊಂಡು ಅಸಲು ದಾವಾ ನಂ. 63/2019 ರ ದಾವೆ ದಾಖಲು ಮಾಡಿಕೊಂಡು ಅದರಲ್ಲಿ ಅಪಸಾತ ವಾಟ್ನಿ ಮಾಡಿಕೊಂಡಿದ್ದೇವೆ ಎಂದರೆ ಸರಿ, ಆದರೆ ಆ ಸಮಯದಲ್ಲಿ ಅಸಲು ದಾವಾ ನಂ. 329/2019 ರ ದಾವೆ ದಾಖಲು ಮಾಡಿರಲಿಲ್ಲ. ಅದೇ ರೀತಿ ಅಸಲು ದಾವಾ ನಂ. 227/2013 ರ ದಾವೆಯು ಸಹ ಚಾಲ್ತಿಯಲ್ಲಿ ಇರಲಿಲ್ಲ. ಅಸಲು ದಾವಾ ನಂ.63/2019 ರ ದಾವೆಯನ್ನು ದಿಃ 28.02.2019 ರಂದು ದಾಖಲು ಮಾಡಿದ್ದೇವೆ ಎಂದರೆ ಸರಿ. ಆ ದಾವೆಯಲ್ಲಿದಿಃ 25.04.2019 ರಂದು ಅಪಸಾತ್ ಅರ್ಜಿಯನ್ನು ದಾಖಲು ಮಾಡಿ ಆ ದಾವೆಯನ್ನು ನಿಖಾಲಿ ಮಾಡಿಕೊಂಡಿದ್ದೇವೆ ಎಂದರೆ ಸರಿ. ಅಸಲು ದಾವಾ ನಂ. 63/2019 ರ ದಾವೆಯಲ್ಲಿಯೂ ಸಹ ಶ್ರೀ ಎಸ್ ಜಿ ನಿರಾಣಿ ವಕೀಲರನ್ನೇ ನೇಮಕ ಮಾಡಿಕೊಂಡಿದ್ದೇವೆ ಎಂದರೆ ಸರಿ.

2. ನನ್ನ ಸಾಕ್ಷ್ಯದಲ್ಲಿ ಹೇಳಿರುವಂತೆ ಖರೀದಿ ಕರಾರು ಪತ್ರವನ್ನು ವಾದಿಯರೇ ತಯಾರು ಮಾಡಿಸಿದ್ದು ಅದರ ಮೇಲೆ ನಾವು ಸಹಿ ಮಾಡಿರುವುದಾಗಿ ಎಂದು ನಾವು ಸುಳ್ಳು ಹೇಳುತ್ತಿದ್ದೇವೆ ಎಂದರೆ ಸರಿಯಲ್ಲ. ವಾದಿಯರು ತಮ್ಮ ಮಾಲೀಕತ್ವದ ಬೇರೆ ಜಮೀನು ಮಾರುವುದಾಗಿ ಎಂದು ಹೇಳಿ ನಮ್ಮ ಹತ್ತಿರ ಬಂದಿರುವುದಾಗಿ ಎಂದು ನಾವು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಖರೀದಿ ಪತ್ರವನ್ನು ದಸ್ತೂರು ಬರಹಗಾರ ತಯಾರು ಮಾಡಿ ವಾದಿ ಮತ್ತು ಪ್ರತಿವಾದಿಯರಿಗೆ ಓದಿ ಹೇಳಿರುವರು ಹಾಗೂ ಉಪನೊಂದಣಿ

ಕಚೇರಿಯಲ್ಲಿಯೂ ಸಹ ಓದಿ ಹೇಳಿರುವರು. ಈ ಖರೀದಿ ಪತ್ರವನ್ನು ಓದಿ ಹೇಳಿ ನಂತರ ಆ ದಾಖಲೆಯ ಮೇಲೆ ಸಹಿ ಪಡೆದುಕೊಂಡಿರುವರು. ವಾದಿಯರು ಅನಕ್ಷರಸ್ಥರಾಗಿದ್ದು ಹೆಬ್ಬೆಟ್ಟಿನ ಸಹಿ ಮಾಡುವುದರಿಂದ ಆ ದಾಖಲೆಯ ಖರೀದಿ ಪತ್ರವನ್ನು ನಾವೇ ಸೃಷ್ಠಿ ಮಾಡಿಕೊಂಡು ಅದರಲ್ಲಿನ ಸಂಗತಿಗಳನ್ನು ವಾದಿಯರಿಗೆ ಗೊತ್ತಾಗದ ಹಾಗೆ ನಾವು ಅವರ ಸಹಿಗಳನ್ನು ಪಡೆದುಕೊಂಡಿದ್ದೇವೆ ಎಂದರೆ ಸರಿಯಲ್ಲ. ದಸ್ತೂರು ಬರಹಗಾರ ಮತ್ತು ಉಪನೊಂದಣಿ ಕಚೇರಿಯಲ್ಲಿ ಈ ಖರೀದಿ ಪತ್ರವನ್ನು ವಾದಿಯರಿಗೆ ಓದಿ ಹೇಳಿರುವುದಾಗಿ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ವಾದಿಯರು ತಮ್ಮ ಮಾಲೀಕತ್ವದ ಇನ್ನೊಂದು ಜಮೀನು ಮಾರಾಟ ಮಾಡುವುದಾಗಿ ಎಂದು ಹೇಳಿ ಹಿರಿಯರ ಜೊತೆ ಕೂಡಿಕೊಂಡು ನಮ್ಮ ಹತ್ತಿರ ಬಂದಿರಲಿಲ್ಲ ಅಂತ ಸೂಚಿಸುವುದು ಸರಿಯಲ್ಲ. ವಾದಿಯರಿಗೆ ಇನ್ನಷ್ಟು ಸಾಲ ಇರುವುದರಿಂದ ತಮ್ಮ ಇನ್ನೊಂದು ಜಮೀನು ಸಹ ಮಾರಾಟ ಮಾಡಲು ಬಂದಿರುವುದಾಗಿ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೇ ನಂಬರ್ 12/6 ರ ದಿಃ 21.11.2003 ರ ಖರೀದಿ ಕರಾರು ಪತ್ರವು ನೊಂದಣಿಯಾಗಿರುವುದು. ಆದರೆ ಸರ್ವೇ ನಂಬರ್ 12/9 ರ ದಿಃ 21.11.2003 ರ ಖರೀದಿ ಕರಾರು ಪತ್ರ ನೊಂದಣಿಯಾಗಿರುವುದಿಲ್ಲ. ಸರ್ವೇ ನಂಬರ್ 12/6 ರ ದಿಃ 21.11.2003 ರ ನೊಂದಾಯಿತ ಖರೀದಿ ಕರಾರು ಪತ್ರವನ್ನು ಈ ದಾವೆಯಲ್ಲಿ ಹಾಜರು ಪಡಿಸಿರುವೆನು. ಈ ದಾಖಲೆಯನ್ನು ನೊಂದ ಮಾಡಿಕೊಳ್ಳದೇ ಇದ್ದರೂ ಸಹಿತ ನೊಂದ ಮಾಡಿಕೊಂಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ನಿಪಿ 6 ರ ಖಂಡಿಕೆ 11 ರ ಕೊನೆಯ ಎರಡು ಸಾಲುಗಳಲ್ಲಿ ಹೇಳಿ ಬರೆಸಿರುವಂತೆ ನಾವು ಸರ್ವೇ ನಂಬರ್ 66/1 ರ ಜಮೀನಿಗೆ ಸಂಬಂಧಪಟ್ಟಂತೆ ವಾದಿಯ ಹೆಸರಿಗೆ ಮರಳಿ ಹಸ್ತಾಂತರ ಖರೀದಿ ಪತ್ರ ಮಾಡಿಕೊಡುವುದಾಗಿ ಎಂದು ಹೇಳಿ ಬರೆಸಿರುವ ಸಂಗತಿ ನಿಜವಿರುವುದಿಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ನಿಪಿ 6 ರ ಖಂಡಿಕೆ 12 ರಲ್ಲಿ ಬರೆಸಿರುವ ಸಂಗತಿ ನಿಜವಿರುವುದಿಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಸಲು ದಾವಾ ನಂ. 63/2019 ರ ದಾವೆಯಲ್ಲಿ ಒಟ್ಟು

24 ಎಕರೆ ಜಮೀನಿಗೆ ಸಂಬಂಧಪಟ್ಟಂತೆ ರಾಜಿ ಡಿಕ್ರಿ ಮಾಡಿಕೊಂಡಿದ್ದು, ಅಸಲು ದಾವಾ ನಂ. 63/2019 ರ ದಾವೆಯಲ್ಲಿ ವಾದಿಯರಿಗೆ ಸಂಬಂಧಪಟ್ಟಂತೆ ಸರ್ವೇ ನಂಬರ್ 66/1 ಮತ್ತು 12/6 ರ ಜಮೀನನ್ನು ಸಹ ಒಳಗೊಂಡಿದ್ದವು. ಸರ್ವೇ ನಂಬರ್ 66/1 ರ ಜಮೀನಿಗೆ ಸಂಬಂಧಪಟ್ಟಂತೆ ಅಸಲು ದಾವಾ ನಂ.325/2019 ರ ದಾವೆ ವಿಚಾರಣೆಯ ಹಂತದಲ್ಲಿ ಇದ್ದರೂ ಸಹಿತ ಅದನ್ನು ರಾಜಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಸರ್ವೇ ನಂಬರ್ 66/1 ರ ಜಮೀನಿಗೆ ಸಂಬಂಧಪಟ್ಟಂತೆ ಖೊಟ್ಟಿಯಾಗಿ ನೊಂದಾಯಿತ ಖರೀದಿ ಪತ್ರ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಂತರ ಪಹಣಿ ಪತ್ರಿಕೆಯಲ್ಲಿಯೂ ಸಹ ಖೊಟ್ಟಿಯಾಗಿ ನಮ್ಮ ಹೆಸರನ್ನು ದಾಖಲು ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ವಾದಿಯರು ಸರ್ವೇ ನಂಬರ್ 12/6 ವಿಸ್ತೀರ್ಣ 28 ಗುಂಟೆ ಜಮೀನನ್ನು ಮಾತ್ರ ಮಾರಾಟ ಮಾಡಿರುವರು ಎಂದರೆ ಸರಿಯಲ್ಲ. ಸರ್ವೇ ನಂಬರ್ 12/9 ವಿಸ್ತೀರ್ಣ 3 ಎಕರೆ 5 ಗುಂಟೆ ಹಾಗೂ 66/1 ವಿಸ್ತೀರ್ಣ 5 ಎಕರೆ 21 ಗುಂಟೆ ಜಮೀನುಗಳು ಇವತ್ತಿನವರೆಗೂ ವಾದಿಯರ ಕಬ್ಜೆಯಲ್ಲಿ ಇರುವವು ಎಂದರೆ ಸರಿಯಲ್ಲ. ಈ ಎರಡು ಜಮೀನುಗಳನ್ನು ವಾದಿಯರು ನಮಗೆ ಮಾರಾಟ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಈ ಎರಡು ಜಮೀನುಗಳಿಗೆ ಸಂಬಂಧಪಟ್ಟಂತೆ ವಾದಿಯರು ಸ್ವ ಇಚ್ಛೆಯಿಂದ ಬಂದ ನಮ್ಮ ಹೆಸರಿನಲ್ಲಿ ನೊಂದಾಯಿತ ಖರೀದಿ ಪತ್ರ ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಸರ್ವೇ ನಂಬರ್ 66/1 ರ ಜಮೀನಿನ ಖರೀದಿ ಪತ್ರವನ್ನು ಖೊಟ್ಟಿಯಾಗಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ.

5. ಸರ್ವೇ ನಂಬರ್ 66/1 ರ ಜಮೀನಿನಲ್ಲಿ 3 ಎಕರೆ ಜಮೀನನ್ನು ಖರೀದಿ ಮಾಡಿರುವೆವು. ಸರ್ವೇ ನಂಬರ್ 12/6 ಮತ್ತು 12/9 ರ ಜಮೀನಿನ ಮಾರುಕಟ್ಟೆಯ ಮೌಲ್ಯ ಒಟ್ಟಾಗಿ ರೂ. 3,36,600/- ಅಂತ ಖರೀದಿ ಕರಾರು ಪತ್ರದಲ್ಲಿ ಬರೆಸಿರುವೆವು. ಈ ಖರೀದಿ ಕರಾರು ಪತ್ರ ಬರೆದ ದಿನದಂದು ರೂ. 1,68,300/- ವಾದಿಯರಿಗೆ ನೀಡಿರುವೆವು. ಲಿಖಿತ ಪತ್ರದಲ್ಲಿ ರೂ. 1,66,300/- ಅಂತ ಬರೆಸಿದ್ದೇವೆ ಎಂದರೆ ಸರಿಯಲ್ಲ. ಅದೇ ರೀತಿ ನನ್ನ ಸಾಕ್ಷಿಯ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿಯೂ ಸಹ ರೂ. 1,66,300/- ಅಂತ ಬರೆಸಿದ್ದೇನೆ ಅಂತ ಸೂಚಿಸುವುದು ಸರಿಯಲ್ಲ. ರೂ. 1,68,300/- ಹಣವನ್ನು ವಾದಿಯರಿಗೆ ನಾವು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಈ ಹಣ ವಾದಿಯರಿಗೆ ಯಾವುದೇ ರೀತಿಯಿಂದ

ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಖರೀದಿ ಪತ್ರದಲ್ಲ ರೂ . 1,73,000/- ಹಣವನ್ನು ವಾದಿಯರಿಗೆ ನೀಡುವೆವು ಅಂತ ಬರೆಸಿರುವ ಸಂಗತಿ ನಿಜವಿರುವುದಿಲ್ಲ. ವಾದಿಯರು ಸರ್ವೇ ನಂಬರ್ 66/1 ರ ಜಮೀನಿನ್ನು ಮಾರಾಟ ಮಾಡುವ ಯಾವುದೇ ಪ್ರಸಂಗ ಉದ್ಭವಿಸಿರುವುದಿಲ್ಲ ಎಂದರೆ ಸರಿಯಲ್ಲ. ದಿಃ 21.11.2003 ರ ಖರೀದಿ ಕರಾರು ಪತ್ರ ಆದ ನಂತರ ವಾದಿಯರಿಗೆ ಯಾವುದೇ ಮನೆತನದ ಅಡಚಣೆ ಇರಲಿಲ್ಲ ಎಂದರೆ ಸರಿಯಲ್ಲ. ವಾದಿಯರು ಪರಿಶಿಷ್ಟ ಪಂಗಡದವಾಗಿರುವುದರಿಂದ ನಾನು ಮೇಲ್ ವರ್ಗದವನಾಗಿರುವುದರಿಂದ ಆ ಕಾರಣಕ್ಕೆ ವಾದಿಯರ ಮೇಲೆ ಪ್ರಭಾವ ಬೀರಿ ಖೊಟ್ಟಿ ದಾಖಲೆಯನ್ನು ಸೃಷ್ಟಿ ಮಾಡಿಕೊಂಡಿದ್ದೇನೆ ಅಂತ ಸೂಚಿಸುವುದು ಸರಿಯಲ್ಲ. ಇವತ್ತಿವರೆಗೂ ಸರ್ವೇ ನಂಬರ್ 66/1 ಮತ್ತು 12/9 ರ ಜಮೀನುಗಳು ವಾದಿಯರ ಕಬ್ಜೆಯಲ್ಲಿ ಇರುವವು ಎಂದರೆ ಸರಿಯಲ್ಲ. ದಿಃ 23.08.2004 ರ ಖರೀದಿ ಪತ್ರದ ಪ್ರಕಾರ ಸರ್ವೇ ನಂಬರ್ 12/6 ರ ವಿಸ್ತೀರ್ಣ 28 ಗುಂಟೆ ಜಮೀನು ಮಾತ್ರ ನಮ್ಮ ಕಬ್ಜೆಯಲ್ಲಿ ಇರುವುದು ಅಂತ ಸೂಚಿಸುವುದು ಸರಿಯಲ್ಲ.

6. ಈ ಖರೀದಿ ಕರಾರು ಪತ್ರ ಆದ ದಿನದಂದು ಸರ್ವೇ ನಂಬರ್ 12/9 ಮತ್ತು 12/6 ರ ಜಮೀನುಗಳ ಕಬ್ಜೆಯನ್ನು ನಾನು ನೀಡಿರುವುದಾಗಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೇ ನಂಬರ್ 12/6 ರ ಜಮೀನನ್ನು ಖರೀದಿ ಮಾಡಿದ ನಂತರ ನಮ್ಮ ಕಬ್ಜೆಯಲ್ಲಿ ಇರುವುದು ಎಂದರೆ ಸರಿ. ಸರ್ವೇ ನಂಬರ್ 66/1 ರ ಜಮೀನಿಗೆ ಸಂಬಂಧಪಟ್ಟಂತೆ ನಮ್ಮ ಮತ್ತು ವಾದಿಯರ ಮಧ್ಯೆ ಯಾವುದೇ ವ್ಯವಹಾರ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಸರ್ವೇ ನಂಬರ್ 12/9 ರ ಜಮೀನಿಗೆ ಸಂಬಂಧಪಟ್ಟಂತೆ ಖರೀದಿ ಕರಾರು ಪತ್ರವನ್ನು ಹೊರತು ಪಡಿಸಿ ಯಾವುದೇ ವ್ಯವಹಾರ ಅಗಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಯರು ಅನಕ್ಷರಸ್ಥರಾಗಿರುವುದರಿಂದ ಅದರ ದುರುಪಯೋಗಪಡೆದುಕೊಂಡು ಖೊಟ್ಟಿಯಾದ ನೊಂದಾಯಿತ ಖರೀದಿ ಪತ್ರವನ್ನು ನೊಂದಣಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಾನು, ಪ್ರತಿವಾದಿ 2 ಹಾಗೂ ಹಿರಿಯರು ಕೂಡಿಕೊಂಡು ವಾದಿಯರಿಗೆ ಯಾವುದೇ ಮಾಹಿತಿಯನ್ನು ನೀಡದೇ ಈ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಹಿರಿಯರು ನಮಗೆ

ಅನುಕೂಲವಾಗುವ ಸಲುವಾಗಿ ಆ ದಾಖಲೆಗಳನ್ನು ಖೊಟ್ಟಿಯಾಗಿ ಸೃಷ್ಟಿಸಿ ಅದರ ಮೇಲೆ ಅವರ ಸಹಿಗಳನ್ನು ಪಡೆದುಕೊಂಡಿದ್ದೇವೆ ಎಂದರೆ ಸರಿಯಲ್ಲ. ಸರ್ವೇ ನಂಬರ್ 66/1 ಮತ್ತು 12/9 ರ ಜಮೀನುಗಳ ಮಾಲೀಕರು ಮತ್ತು ಕಬ್ಜೆದಾರರು ವಾದಿಯರೇ ಇರುವರು ಎಂದರೆ ಸರಿಯಲ್ಲ. ವಾದಿಯರಿಗೆ ತೊಂದರೆ ನೀಡುವ ಸಲುವಾಗಿ ಖೊಟ್ಟಿಯಾದ ದಾಖಲೆ ಸೃಷ್ಟಿ ಮಾಡಿ ಸುಳ್ಳು ಮುಖ್ಯ ವಿಚಾರಣೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಖರೀದಿ ನೊಂದಣಿ ಪತ್ರವು ಮುಂಜಾನೆ 11.00 ಗಂಟೆಯ ನಂತರ ನೊಂದಣಿಯಾಗಿರುವುದು. ಖರೀದಿ ಪತ್ರಗಳ ನಿಜಸಂಗತಿ ವಾದಿಯರಿಗೆ ಗೊತ್ತಾಗದ ಹಾಗೆ ಪ್ರಭಾವನ್ನು ಬೀರಿ ಅವುಗಳನ್ನು ನೊಂದಣಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ